**ಸಾಕ್ಷಿಯನ್ನು ದಿಃ15.10.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ಸ.ನಂ.82 ರಲ್ಲಿ ಶರವಣ ಮತ್ತು ರಾಣಿ ರವರಿಗೆ ಮಾರಾಟ ಜಮೀನು ಸೇರಿದರೆ ಒಟ್ಟು ಎಷ್ಟು ಜಮೀನು ಎಂದರೆ, ಸ.ನಂ.82 ರಲ್ಲಿ ಮಾರಾಟ ಮಾಡಲಾಗಿದೆ, 83 ರಲ್ಲಿ ಅಲ್ಲ.

2. ಶರವಣ ಮತ್ತು ರಾಣಿ ರವರ ಇಟ್ಟಿಗೆ ಫ್ಯಾಕ್ಟರಿ ಸ.ನಂ.82 ರಲ್ಲಿ ಇದೆ. ಸದರಿಯವರ ಇಟ್ಟಿಗೆ ಫ್ಯಾಕ್ಟರಿ ಸ.ನಂ.83 ರಲ್ಲಿ ಬಂದರೂ ಸಹ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

3. ದಾವಾ ಸ್ವತ್ತನ್ನು ನಮ್ಮ ತಂದೆ ತಾಯಿಗೆ ಜೀವನಾಂಶದ ಸಲುವಾಗಿ ಬಿಟ್ಟಿದ್ದರು ಎಂದು ತೋರಿಸಲು ದಾಖಲೆ ಇದ್ದಾವಾ ಎಂದರೆ, ನನಗೆ ಗೊತ್ತಿಲ್ಲ. ಯಾವ ದಿನಾಂಕದಂದು ಬಿಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ವಿಚಾರ ವಾಸುದೇವ ರವರಿಗೆ ಗೊತ್ತಾ ಎಂದರೆ, ಗೊತ್ತು.

4. ದಾವಾ ಸ್ವತ್ತು ಸ.ನಂ.83 ರಲ್ಲಿ ಒಟ್ಟು 1 ಎಕರೆ 37 ಗುಂಟೆ ಇದೆ. ಸದರಿ ಜಮೀನು ಯಾರ ಮಾಲೀಕತ್ವ ಮತ್ತು ಸ್ವಾಧೀನದಲ್ಲಿ ಇತ್ತು ಎಂದರೆ, ನನ್ನ ತಾಯಿ ಮಾಲೀಕತ್ವ ಮತ್ತು ಸ್ವಾಧೀನದಲ್ಲಿ ಇತ್ತು. ನನ್ನ ತಾಯಿಗೆ ಯಾವ ರೀತಿ ಬಂತು ಎಂದರೆ, ಅವರು ಖರೀದಿಸಿದ ಜಮೀನು.

5. ನನ್ನ ತಾಯಿ ಸುಮಾರು 1947 ರಲ್ಲಿ ಖರೀದಿ ಮಾಡಿರಬಹುದು. ಆ ಸಮಯದಲ್ಲಿ ನನ್ನ ತಾಯಿಗೆ ಮದುವೆ ಆಗಿತ್ತು.

6. ನಿಮ್ಮ ತಾಯಿಯು ನಿಮ್ಮ ತಂದೆ ಹೇಳಿದಂತೆ ನಡೆದುಕೊಂಡು ಕೆಲಸ ಕಾರ್ಯ ಮಾಡಿಕೊಂಡು ಹೋಗುತ್ತಿದ್ದರಾ ಎಂದರೆ, ಹೌದು.

7. ನಿಮ್ಮ ತಾಯಿ ಕುಟುಂಬದಲ್ಲಿ ಅಡುಗೆ ಕೆಲಸ ಮಾಡಿಕೊಂಡು ಹೋಗುತ್ತಿದ್ದರಾ ಎಂದರೆ, ತರಕಾರಿ ಬೆಳೆಯುತ್ತಿದ್ದರು ಹಾಗೂ ಹಸುಗಳಿಂದ ಹಾಲು ಮಾರಿದ ಹಣ ಇಟ್ಟುಕೊಳ್ಳುತ್ತಿದ್ದರು, ಅದರಿಂದ ಖರೀದಿ ಮಾಡಿರುತ್ತಾರೆ.

8. ತರಕಾರಿಯನ್ನು ಯಾವ ಜಮೀನಿನಲ್ಲಿ ಬೆಳೆಯುತ್ತಿದ್ದರು ಎಂದು ನನಗೆ ಮಾಹಿತಿ ಇಲ್ಲ.

9. ಆ ಸಮಯದಲ್ಲಿ ನಿಮ್ಮ ತಾಯಿ ಹೆಸರಿನಲ್ಲಿ ಯಾವುದಾದರೂ ಜಮೀನುಗಳು ಇದ್ದವಾ ಎಂದರೆ ನನಗೆ ಗೊತ್ತಿಲ್ಲ.

10. ಆ ಸಮಯದಲ್ಲಿ ನಿಮ್ಮ ತಂದೆಯ ಹೆಸರಿನಲ್ಲಿ ಯಾವುದಾದರೂ ಜಮೀನುಗಳು ಇದ್ದವಾ ಎಂದರೆ, ಇದ್ದವು.

11. ನನ್ನ ತಾಯಿ ಹಾಲು ಮಾರುತ್ತಿದ್ದ ಸಮಯದಲ್ಲಿ ನಾನು ಹುಟ್ಟಿರಲಿಲ್ಲ.

12. ನನ್ನ ತಾಯಿ ಜಮೀನು ಖರೀದಿ ಮಾಡಿದ ಎಷ್ಟು ವರ್ಷಕ್ಕೆ ನೀವು ಹುಟ್ಟಿದ್ದೀರಾ ಎಂದರೆ, ನಾನು 1959 ರಲ್ಲಿ ಹುಟ್ಟಿದೆ.

13. ನನ್ನ ತಾಯಿ ಹಾಲು ಮಾರಿದ ಹಣದಿಂದ ಜಮೀನು ಖರೀದಿ ಮಾಡಿದ್ದಾಗಿ ನನ್ನ ತಾಯಿಯೇ ನನಗೆ ಮಾಹಿತಿ ನೀಡಿರುತ್ತಾರೆ.

14. ವಾದಪತ್ರದಲ್ಲಿರುವ ಅಂಶಗಳನ್ನು ಬರೆಯಲು ನಮ್ಮ ವಕೀಲರಿಗೆ ಅಣ್ಣ ವಾಸುದೇವ ರವರು ಮಾಹಿತಿ ನೀಡಿರುತ್ತಾರೆ. ಮೈಸೂರಿನ ಮಂಜುನಾಥ ವಕೀಲರ ಕಛೇರಿಗೆ ಹೋಗಿ ಬರೆಸಿರುತ್ತೇವೆ.

15. ದಾವಾ ಸ್ವತ್ತು ವಿಭಾಗ ಆದಾರ ನಿಮ್ಮ ತಂದೆ ತಾಯಿಗಳ ಜೀವನಾಂಶಕ್ಕೆ ಬಿಟ್ಟಿತ್ತು ಎಂದು ವಾಸುದೇವ ಅಥವಾ ನೀವು ವಕೀಲರಿಗೆ ಮಾಹಿತಿ ನೀಡಿದ್ದೀರಾ ಎಂದರೆ, ನೀಡಿದ್ದೇವೆ.

16. ದಾವಾ ಸ್ವತ್ತು ನಮ್ಮ ತಾಯಿಯ ಸ್ವಯಾರ್ಜಿತ ಆಸ್ತಿ.

17. ನನ್ನ ತಾಯಿ ಬದುಕಿದ್ದಾಗ ಮರಣ ಶಾಸನ ಬರೆಸಿಲ್ಲ.

18. ನಿಮ್ಮ ಅಣ್ಣ ನಿಮ್ಮ ಜೊತೆ ಪಕ್ಷಗಾರರಾಗುತ್ತೇವೆ ಎಂದು ಹೇಳಿದ್ದರಾ ಎಂದರೆ, ನನಗೆ ಗೊತ್ತಿಲ್ಲ.

19. ವಾಸುದೇವ ರವರನ್ನು ದಾವಾ ಸ್ವತ್ತುಗಳಲ್ಲಿ ಭಾಗ ಕೊಡುವಂತೆ ಕೇಳಿದ್ದೀರಾ ಎಂದರೆ, ಇಲ್ಲ, ಎಲ್ಲಾ ಅಣ್ಣಂದಿರನ್ನೂ ಕೇಳಿದ್ದೇನೆ. ಆ ರೀತಿ ನಾರಾಯಣ, ರಾಜೇಶೇಖರ, ವಾಸುದೇವ ಹಾಗೂ ನನ್ನ ತಮ್ಮ ಉಮೇಶರವರನ್ನು ಕೇಳಿದ್ದೆ. ನನ್ನ ತಾಯಿ ಮರಣದ ನಂತರ ಕೇಳಿರುತ್ತೇನೆ. ದಿನಾಂಕ ನನಗೆ ಗೊತ್ತಿಲ್ಲ. ನನ್ನ ತಾಯಿ 2020 ರಲ್ಲಿ ಮೃತರಾಗಿರುತ್ತಾರೆ.

20. ನನ್ನ ತಾಯಿ ವಯೋವೃದ್ಧರಾಗಿ ಮರಣ ಹೊಂದಿರುತ್ತಾರೆ. ಅವರು ಸಾಯುವರೆಗೆ ಅವರ ವಿವೇಚನೆ ಚೆನ್ನಾಗಿ ಇತ್ತು.

21. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಕಟ್ಟಡ ಕಟ್ಟುವ ಕಾಲದಲ್ಲಿ ನಿಮ್ಮ ತಾಯಿ ಬದುಕಿದ್ದರಾ ಎಂದರೆ, ಬದುಕಿರಲಿಲ್ಲ.

22. ಕಟ್ಟಡ ಕಟ್ಟಿರುವ ವಿಚಾರವನ್ನು ನಿಮ್ಮ ವಕೀಲರಿಗೆ ನೀವು ಕೊಟ್ಟಿದ್ದಾ ವಾಸುದೇವರವರು ಕೊಟ್ಟಿದ್ದಾ ? ಎಂದರೆ, ನನಗೆ ಗೊತ್ತಿಲ್ಲ.

23. ನೀವು ಅಥವಾ ವಾಸುದೇವ ರವರು ಕಟ್ಟಿರುವ ಕಟ್ಟಡಗಳನ್ನು ಕೆಡವಿ ಹಾಕಬೇಕು ಎಂದು ಮಾಹಿತಿ ನೀಡಿದ್ದೀರಾ ಎಂದರೆ, ನಾನು ಕೊಟ್ಟಿಲ್ಲ, ಅವರು ಕೊಟ್ಟಿದ್ದಾರಾ ಇಲ್ಲ ಎಂದು ಗೊತ್ತಿಲ್ಲ.

24. ದಾವಾ ಜಮೀನಿನ ಸ್ವಾಧೀನದಲ್ಲಿ ನಿಮ್ಮ ಅಣ್ಣಂದಿರು ಇದ್ದಾರಾ ಎಂದರೆ, ಹೌದು.

25. ನೀವು ದಾವಾ ಜಮೀನನ್ನು ಪರಿಶೀಲನೆ ಮಾಡಲು ಹೋಗಿದ್ದೀರಾ ಎಂದರೆ, ನೋಡಿದ್ದೇನೆ. ನನ್ನ ತಾಯಿ ಮೃತರಾದಾಗ ಹೋಗಿರುತ್ತೇನೆ.

26. ದಾವಾ ಜಮೀನಿನಲ್ಲಿ ನನ್ನ ತಾಯಿಯ ಅಂತ್ಯ ಸಂಸ್ಕಾರ ಮಾಡಿಲ್ಲ, ಆದರೆ ಸದರಿ ಜಮೀನು ದಾಟಿಕೊಂಡು ಹೋಗಬೇಕು ಎಂದು ನುಡಿಯುತ್ತಾರೆ. ಅದರ ಸರ್ವೇ ನಂಬರ್ ನನಗೆ ಗೊತ್ತಿಲ್ಲ.

27. ನಮ್ಮ ಸಮಾಜದಲ್ಲಿ ಅವರ ಸ್ವಂತ ಜಮೀನಿನಲ್ಲಿ ಮೃತರನ್ನು ಅಂತ್ಯ ಸಂಸ್ಕಾರ ಮಾಡುತ್ತಾರೆ ಎಂದರೆ ಸರಿ. ನಾವು ಒಕ್ಕಲಿಗ ಸಮುದಾಯಕ್ಕೆ ಸೇರಿದವರು ಎಂದರೆ ಸರಿ.

28. ದಾವಾ ಜಮೀನಿನ ದಕ್ಷಿಣಕ್ಕೆ ಯಾರ ಜಮೀನು ಎಂದು ನನಗೆ ಈ ನೆನಪಿಲ್ಲ. ಚಕ್ಕುಬಂದಿ ನನಗೆ ಈಗ ನೆನಪಿಲ್ಲ.

29. ದಾವಾ ಜಮೀನಿಗೆ ಶರವಣ ಮತ್ತು ರಾಣಿ ರವರ ಜಮೀನು ಹೊಂದಿಕೊಂಡಂತೆ ಇದೆಯಾ ಎಂದರೆ, ನನಗೆ ಗೊತ್ತಿಲ್ಲ.

30. ದಾವಾ ಆಸ್ತಿಯಲ್ಲಿ ನಿಮಗೆ ಯಾವುದೇ ಹಿಸ್ಸಾ ಹಕ್ಕು ಇಲ್ಲ ಎಂದರೆ ಸರಿಯಲ್ಲ.

31. ನೀವು 8 ಮತ್ತು 10 ನೇ ಪ್ರತಿವಾದಿಯ ಆಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

32. ದಾವಾ ಸ್ವತ್ತನ್ನು ನಿಮ್ಮ ತಂದೆ ತಾಯಿಗಳ ಜೀವನಾಂಶಕ್ಕೆ ಬಿಟ್ಟಂತಹ ಸ್ವತ್ತು ಅಲ್ಲ ಎಂದರೆ ಸರಿಯಲ್ಲ.

33. 8 ಮತ್ತು 10 ನೇ ಪ್ರತಿವಾದಿಗಳನ್ನು ಭಾಗ ಕೊಡುವಂತೆ ಕೇಳಿಲ್ಲ ಎಂದರೆ ಸರಿಯಲ್ಲ.

34. ನೀವು ಮತ್ತು ವಾಸು ರವರು ಪರಸ್ಪರ ಶಾಮೀಲಾಗಿ 8 ಮತ್ತು 10 ನೇ ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸಲು ನಿಮ್ಮ ಕಡೆಯಿಂದ ಸುಳ್ಳು ದಾವೆ ಹಾಕಿಸಿದ್ದಾರೆ ಎಂದರೆ ಸರಿಯಲ್ಲ.

35. ಈ ದಾವೆಗೆ ಯಾವುದೇ ವ್ಯಾಜ್ಯಕಾರಣ ಇಲ್ಲ ಎಂದರೆ ಸರಿಯಲ್ಲ. 8 ಮತ್ತು 10 ನೇ ಪ್ರತಿವಾದಿಗಳಿಗೆ ತೊಂದರೆಯಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

36. ನಿಪಿ - 3 ರ ಕಟ್ಟಡವನ್ನು ದಾವಾ ಸ್ವತ್ತಿನಲ್ಲಿ ಯಾರು ಕಟ್ಟಿದ್ದಾರೆ ಎಂದರೆ, ನನಗೆ ಗೊತ್ತಿಲ್ಲ.

37. ಈ ದಾವೆಗಾಗಿ ನೀವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ